# ಪರ್ಯಾಯ ದಲಿತ

'ದಲಿತ' ಎಂಬ ಪದ ಕಳೆದ ನಾಲ್ಕು ದಶಕಗಳಿಂದ ಚಾಲ್ತಿಯಲ್ಲಿರುವ ಪದ. ಅಂಬೇಡ್ಕರ್ ಸಾಹಿತ್ಯದಲ್ಲಿ ಈ ಪದ ಬಳಕೆಯಾಗಿಲ್ಲ. ಈ ಸಮೂಹವನ್ನು ಪ್ರತಿನಿಧಿಸಲು ಅಲ್ಲಿ ಹೆಚ್ಚು ಬಳಕೆಯಾಗಿರುವ ಪದ ನಿಮ್ನವರ್ಗದವರು ಎಂತಲೇ. ನಂತರ ಅನುಸೂಚಿತ ಜಾತಿಗಳು/ ವರ್ಗಗಳು ಎಂತಲೂ ಪ್ರಯೋಗಿಸಲಾಯಿತು. ಈಗಲೂ ಅದು ಸರ್ಕಾರಿ ಕಡತಗಳಲ್ಲಿ ಹೆಚ್ಚು ಅನುಕೂಲಕರ ಪರಿಭಾಷೆಯಾಗಿ ಬಳಕೆಯಾಗುತ್ತಿದೆ. ಎಪ್ಪತ್ತರ ದಶಕದಲ್ಲಿ ಮಹಾರಾಷ್ಟ್ರದಲ್ಲಿ 'ದಲಿತ್ ಪ್ಯಾಂಥರ್ಸ್' ಹುಟ್ಟಿನೊಂದಿಗೆ ಈ ಪದ ಹೆಚ್ಚು ಚಾಲ್ತಿಗೂ, ಹೆಚ್ಚು ಚರ್ಚೆಗೂ ಬಂತು. ಜಾತಿ ಪದ್ಧತಿಯ ಒಳಗಡೆ (ಹೊರಗೂ ಅಂದುಕೊಳ್ಳಬಹುದು) ತಳಸಮುದಾಯಗಳಲ್ಲಿ ಹೆಸರಿಸಲಾಗದಿದ್ದ, ವಿಶೇಷ ರೀತಿಯಲ್ಲಿ ಅವಮಾನಕ್ಕೊಳಗಾಗುತ್ತಿದ್ದ, ಒಂದು ರೀತಿಯಲ್ಲಿ ಅಮಾನವೀಯಗೊಂಡಿದ್ದ ಅಂದರೆ ಅಸ್ಪೃಶ್ಯತಾ ಆಚರಣೆಯಿಂದ ಹುಟ್ಟಿನಿಂದ ಮೈಲಿಗೆಗೊಳಗಾಗಿದ್ದ, ಯಾವ ಹೆಸರುಗಳನ್ನು ಕರೆದರೆ ಅದು ಬೈಗುಳಕರವೋ, ಅಸಹ್ಯ ಸೂಚಕವೋ, ಸಾರ್ವಜನಿಕವಾಗಿ ಉಚ್ಚರಿಸಲ್ಪಡಲಾರದಂತಹವೋ ಅಂತಹ ಜಾತಿಗಳನ್ನು ಒಟ್ಟಾರೆಯಾಗಿ ದಲಿತ ಎಂಬ ಪದದಡಿಯಲ್ಲಿ ದೂಡಲಾಯಿತು. ಇದು ಒಂದು ಜಾತಿಯ ಗುರುತಲ್ಲ. ಶೋಷಿತ ಸಮುದಾಯಗಳ ಸಾಮುದಾಯಿಕ ಅಸ್ಮಿತೆಗೆ ನೀಡಿದ ಔದಾರ್ಯ ಪೂರ್ಣ ಪದ ಅಥವಾ ಅಂಚಿನಲ್ಲಿದ್ದ ಜಾತಿಗಳ ಮರುನಾಮಕರಣ ಎನ್ನಬಹುದು.

ಇದು ಸಾಂಸ್ಕೃತಿಕ ಅಸ್ಮಿತೆಯನ್ನು ತೋರುವ ಪದವಲ್ಲ. ಯಾಕೆಂದರೆ ಇವರ್‍ಯಾರೂ ಸಾಂಸ್ಕೃತಿಕವಾಗಿ ಒಂದು ಗುಂಪಲ್ಲ. ಅಸ್ಪೃಶ್ಯ ಮತ್ತು ಅವಮಾನಿತರಾದರೂ ಅವರ ಸಾಂಸ್ಕೃತಿಕ ಒಂದುಗೂಡುವಿಕೆ, ಮದುವೆ ಇತ್ಯಾದಿಗಳು ಅವರವರ ಜಾತಿಯ ಒಳಗೇ ನಡೆಯುವಂತಹವು. ಕಾಲ ಉರುಳಿದಂತೆ ದಲಿತ ಪದದ ಅರ್ಥ ವೈಶಾಲ್ಯ ಹೆಚ್ಚುತ್ತಾಹೋಯಿತು. ಅಂದರೆ ಪಾರಂಪರಿಕವಾಗಿ ವಂಚಿತ ಬಡವರಾಗಿದ್ದ ಅಶ್ಪೃಶ್ಯ+ ಅವಮಾನಿತರ ಜೊತೆಗೆ ಶೂದ್ರ ಜಾತಿಗಳ ಬಡ+ ವಂಚಿತ ಜನವರ್ಗವೂ ಸೇರಿಕೊಂಡಿತು. ಒಂದು ರೀತಿಯಲ್ಲಿ ಅದು ಸರಿಯೆ. ಅನಕ್ಷರತೆ, ಅಕೌಶಲ್ಯ, ಆಸ್ತಿರಹಿತ ಜಾತಿಗಳು ತಳಮಟ್ಟದ ಶೂದ್ರವರ್ಗದಲ್ಲಿದ್ದವು. ಅವರನ್ನೂ ವಿಶೇಷ ರೀತಿಯಿಂದಲೇ ಮೇಲೆತ್ತುವುದು ಅನಿವಾರ್ಯವಾಗಿತ್ತು. ಇದರಿಂದ ದಲಿತ ವರ್ಗದ ರಾಜಕೀಯ ಬಾಹುಳ್ಯ ವಿಸ್ತರಿಸಿತು. ಆದರೆ ಸಾಮಾಜಿಕ ಬಂಧದಲ್ಲಿ ಸ್ವಲ್ಪವೂ ವ್ಯತ್ಯಾಸ ಕಾಣಬರಲಿಲ್ಲ, ಕಾರಣ, ಜಾತಿ ತನ್ನ ಬಿಗಿಮುಷ್ಟಿಯನ್ನು ಎಂದಿಗೂ ಸಡಿಲಗೊಳಿಸಲಾರದೆನ್ನುವಷ್ಟು ಉಪಪಂಗಡಗಳು ತಮ್ಮ ಅಸ್ಮಿತೆಯನ್ನು ಕಾಪಾಡಿಕೊಂಡಿವೆ. ಒಂದು ರೀತಿಯಲ್ಲಿ ಇದನ್ನು ಲಿಂಗಾಯತದೊಂದಿಗೆ ಸಮೀಕರಿಸಬಹುದು. ಎಲ್ಲ ಜಾತಿ ಜನವರ್ಗ ಬಸವ ಪ್ರಣೀತ ಏಕದೇವ, ಇಷ್ಟಲಿಂಗ ಪರಿಕಲ್ಪನೆಯನ್ನು ನಂಬಿಬಂದು ಒಂದು ಸಂಕೇತದೊಂದಿಗೆ ಲಿಂಗಾಯತರಾದರಲ್ಲ ಹಾಗೆ (ಈಗಲೂ ಅವರು ಒಳಪಂಗಡಗಳೊಂದಿಗೆ ಗುರುತಿಸಿಕೊಳ್ಳುತ್ತಿರುವುದು ಜಾತಿ ಶಕ್ತಿಯ ಕಾರಣದಿಂದಲೇ). ದಲಿತರು ಬಾಬಾಸಾಹೇಬರು ನೀಡಿರುವ ಸಂವಿಧಾನದತ್ತ ಹಕ್ಕುಗಳನ್ನು ಪಡೆಯುವುದಕ್ಕಾಗಿ ದಲಿತ ಅಭಿದಾನವನ್ನು ಪಡೆದು ಒಂದು ಗೂಡಿದಂತಾಯಿತು. ಆದ್ದರಿಂದ ಇಲ್ಲಿ ಯಾರಿಗೂ ಅವರ ಮೂಲ ಜಾತಿಗೆ ಧಕ್ಕೆ ಒದಗುವ ಸಂಭವವಿಲ್ಲ.

ಈಗ ಈ ಲೇಖಕನನ್ನು ಕಾಡುತ್ತಿರುವ ಆತಂಕವೇನೆಂದರೆ ದಲಿತ ಅಸ್ಮಿತೆ ಶಿಥಿಲಗೊಳ್ಳುತ್ತಿದೆಯೆ? ಹೆಚ್ಚು ರಾಜಕೀಯಗೊಳ್ಳುತ್ತಿರುವ ಸಾಮಾಜಿಕ ಅನನ್ಯತೆ ಅರ್ಥ ಕಳೆದುಕೊಳ್ಳುತ್ತಿದೆಯೆ? ಎಂಬುದು. ಇದುವರೆಗೆ ದಲಿತ ಎಂದರೆ ಅವನು ಅಂಬೇಡ್ಕರ್ ಮೂಸೆಯಲ್ಲಿ ಒಡಮೂಡಿದ ಪ್ರಜ್ಞೆಯನ್ನು ಪ್ರಕಟಿಸುತ್ತಿದ್ದ. ಅವನು ಹಸಿವು, ಬಡತನ, ಅಸ್ಪೃಶ್ಯತೆ, ಅವಮಾನ, ಶೋಷಣೆಗಳ ಸಂಕೇತವಾಗಿದ್ದ. ಮೀಸಲಾತಿಯ ಫಲಾನುಭವಿಯಾಗಿ ವಿದ್ಯಾವಂತನಾದರೂ, ಉದ್ಯೋಗಸ್ಥನಾದರೂ ಕೇವಲ ಹಸಿವು, ಬಡತನ ನೀಗಿಕೊಳ್ಳಬಲ್ಲವನಾಗಿದ್ದನೇ ಹೊರತು ಉಳಿದ ಸಾಮಾಜಿಕ ಜಾಡ್ಯಗಳಿಂದ ಮುಕ್ತನಾಗಲು ಸಾಧ್ಯವಾಗುತ್ತಿರಲಿಲ್ಲ. ಅಂತಹ ಕಳಂಕಗಳ ಬಿಸಿ ರಾಷ್ಟ್ರಪತಿ ಹುದ್ದೆಯನ್ನಲಂಕರಿಸಿದ್ದ ಕೆ. ಆರ್. ನಾರಾಯಣನ್ ಹಾಗೂ ಉಪಪ್ರಧಾನಿಯಾಗಿದ್ದ ಜಗಜೀವನ್‌ರಾಮ್ ಅವರಿಗೂ ತಟ್ಟಿದೆ. ಇಂತಹ ಒಬ್ಬ ಅಂಬೇಡ್ಕರ್‌ವಾದಿ ದಲಿತ ಐತಿಹಾಸಿಕ ಸತ್ಯ.

ಈಗ ಒಬ್ಬ ಹೊಸ ದಲಿತನ ಉದಯವಾಗಿದೆ. ಅವನೇ 'ಹಿಂದೂ ದಲಿತ'. ಅವನಿಗೆ ಅಸ್ಪೃಶ್ಯತೆಯ ನೋವು ಇಲ್ಲ, ಅವಮಾನಗಳು ಕಡಿಮೆ. ತನಗಿಂತಲೂ ಕೆಳಗಿರುವ ಮುಟ್ಟಿಸಿಕೊಳ್ಳಲಾರದ ಜಾತಿಜನರನ್ನು ನೋಡಿ ಕೊಂಚ ಸಮಾಧಾನಿಯಾಗಬಲ್ಲನಾದ್ದರಿಂದ ಜಾತಿಪದ್ಧತಿಯ ಕೆಂಡದುರಿಯನ್ನು ಸಹಿಸಿಕೊಳ್ಳಬಲ್ಲ. ಧರ್ಮವನ್ನು ದ್ವೇಷಿಸಲಾರ, ಯಾಕೆಂದರೆ ಅವನಿಗೆ ದೇವಸ್ಥಾನದ ಒಳಗಡೆಗೆ ಪ್ರವೇಶವಿದೆ. ಕ್ಷೌರಿಕರು ಅವನನ್ನು ತಿರಸ್ಕರಿಸುವುದಿಲ್ಲ. ಬಾಡಿಗೆಮನೆಯೂ ಹೆಚ್ಚು ಕಷ್ಟಪಡದೆ ಸಿಗುತ್ತದೆ. ಆತನಿಗೆ ಅಂಬೇಡ್ಕರ್ ಹಿಂದೂ ಧರ್ಮದ ಸುಧಾರಕರಾಗಿ ಕಾಣಿಸಿಕೊಳ್ಳುತ್ತಾರೆ– ಅಂಬೇಡ್ಕರ್ ವಾದಕ್ಕೆ, ದಲಿತತ್ವಕ್ಕೆ ಎಳ್ಳು ನೀರು ಬಿಡಲು ಇವನಿಗಿಂತಲೂ ಸಮರ್ಥ ವ್ಯಕ್ತಿ ಸಿಕ್ಕಲಾರ. ಬಲಪಂಥೀಯ ಪಕ್ಷವೊಂದು ಇಂತಹ ದಲಿತನೊಬ್ಬನನ್ನು ಹುಡುಕಿ ಎಲ್ಲಕಡೆಯೂ ಬಿಂಬಿಸುತ್ತಿದೆ.

ತಮಿಳು ಪುರಾಣದಲ್ಲಿ ಒಂದು ಕಥೆ ಹೀಗಿದೆಯಂತೆ. ಗಂಡ ಅವಳನ್ನು ಸ್ಮಶಾನಕ್ಕೆ ದರದರನೆ ಎಳೆದೊಯ್ದು. ಕತ್ತಿಯಿಂದ ಅವಳ ಕುತ್ತಿಗೆಯನ್ನು ತುಂಡರಿಸಿದ. ನೋಡುತ್ತಲೇ ಇದ್ದ ಮಗ ಹೇಳಿದ. 'ನೀನು ನಿನ್ನ ಹೆಂಡತಿಯನ್ನು ಕೊಲ್ಲಬಹುದು, ಆದರೆ ನನ್ನ ತಾಯಿಯನ್ನಲ್ಲ. ಒಬ್ಬ ಪ್ರೀತಿಯ, ವಿಧೇಯ ಮಗನಾದ ನಾನು ಅವಳನ್ನು ಹಿಂಬಾಲಿಸುವೆ' ಎಂದ. 'ನಿಲ್ಲು, ಈಗಲೇ ನಿನ್ನ ತಾಯಿಯ ರುಂಡವನ್ನು ಎತ್ತಿ ದೇಹದೊಂದಿಗೆ ಕೂಡಿಸಿ, ನಿನ್ನ ಖಡ್ಗದಿಂದ ಸ್ಪರ್ಶಿಸು. ಅವಳು ಬದುಕಿ ಮೇಲೇಳುತ್ತಾಳೆ' ಅಪ್ಪನ ಆಜ್ಞೆಯಾಯಿತು. ಭಯಭೀತನಾಗಿದ್ದ ಮಗ ತಡಮಾಡದೆ ಸುತ್ತಲೂ ನೋಡಿದ. ರುಂಡವಿಲ್ಲದ ಎರಡು ಹೆಣ್ಣುದೇಹಗಳು ಅಡ್ಡಲಾಗಿ ಬಿದ್ದಿದ್ದವು. ತನ್ನ ತಾಯಿಯ ರುಂಡವನ್ನು ಎತ್ತಿ ಹತ್ತಿರವಿದ್ದ ದೇಹಕ್ಕೆ ಜೋಡಿಸಿ, ಖಡ್ಗವನ್ನು ಝಳಪಿಸಿ ಸೋಕಿಸಿದ. ದೇಹ ಎದ್ದು ನಿಂತಿತು. ಹೇಳಿತು; 'ಆತುರಪಟ್ಟೆ ಮಗನೆ, ಅಲ್ಲಿದೆ ನೋಡು ನಿನ್ನ ತಾಯಿಯ ದೇಹ. ನನ್ನ ರುಂಡವನ್ನು ಅನ್ಯದೇಹದೊಂದಿಗೆ ಬೆಸೆದುಬಿಟ್ಟೆ. ಈಗ ನಾನು ದೇವತೆಗಳ ಜೊತೆಗೆ ಬದುಕುತ್ತೇನೆ. ಆಲೋಚನೆಯಲ್ಲಿ ಬುದ್ಧಿವಂತೆ ಆದರೆ ಕೃತಿಯಲ್ಲಿ ಕ್ರೂರಿ. ಒಬ್ಬ ಬ್ರಾಹ್ಮಣ ಹೆಂಗಸಾಗಿ ನನ್ನ ತಲೆ ಸ್ವರ್ಗದಲ್ಲಿದೆ. ಆದರೆ ಭೂಮಿಯ ಮೇಲೆ ನಾನು ಪರಿಯಳಾಗಿರುತ್ತೇನೆ. ಈ ಕಥೆಯ ಸೂಕ್ಷ್ಮ ನವದಲಿತನಿಗೆ ಅನ್ವಯವಾಗಬಹುದೆ, ಆದರೆ ಪರಿಣಾಮಗಳು ಹೇಗಿರಬಹುದು?

■ ಮೂಚಿ

## ಮಾತೇ ಮುತ್ತು

★ ದೇಹ ಮತ್ತು ಮನಸ್ಸಿನ ಆರೋಗ್ಯದ ಗುಟ್ಟು ಕಳೆದುಹೋದದ್ದಕ್ಕೆ ದುಃಖಿಸುವುದರಲ್ಲಾಗಲೀ ಭವಿಷ್ಯದ ಬಗ್ಗೆ ಭಯ ಪಡುವುದರಲ್ಲಾಗಲೀ ಇಲ್ಲ. ವರ್ತಮಾನವನ್ನು ಗೌರವ ಮತ್ತು ಬುದ್ಧಿವಂತಿಕೆಯಿಂದ ಬದುಕುವುದರಲ್ಲಿ ಇದೆ.

-ಗೌತಮ ಬುದ್ಧ

★ ಜಗತ್ತಿನಲ್ಲಿ ಎಲ್ಲ ಸವಲತ್ತುಗಳು ಇದ್ದರೂ ಸ್ನೇಹಿತರು ಇಲ್ಲದಿದ್ದರೆ ಬದುಕಲು ಸಾಧ್ಯವಿಲ್ಲ.

-ಅರಿಸ್ಟಾಟಲ್

★ ಯಾವುದಾದರೂ ಕೆಲಸ ಆಗಬೇಕೆಂದಿದ್ದರೆ ನೀವೇ ಹೋಗಿ. ಆಗಬಾರದು ಎಂದಿದ್ದರೆ ಯಾರನ್ನಾದರೂ ಕಳಿಸಿ.

-ಬೆಂಜಮಿನ್ ಫ್ರಾಂಕ್ಲಿನ್

★ ನಿಮಗೆ ನೀವು ಏನನ್ನು ಮಾಡಲು ಬಯಸುವುದಿಲ್ಲವೋ ಅದನ್ನು ಇನ್ನೊಬ್ಬರಿಗೂ ಮಾಡಬೇಡಿ.

-ಕನ್‌ಫ್ಯೂಷಿಯಸ್

★ ಹೆತ್ತವರು ಒಳ್ಳೆಯ ದಾರಿಯಲ್ಲಿ ನಡೆಯಲು ಸಲಹೆ ಕೊಡಬಹುದು. ಆದರೆ ವ್ಯಕ್ತಿಯ ಗುಣನಡತೆ ಉತ್ತಮಗೊಳ್ಳುವುದು ಅವನ ಕೈಯಲ್ಲೇ ಇದೆ.

-ಆನ್ ಫ್ರಾಂಕ್

★ ಲೇಖಕನಾದವನು ಏನನ್ನು ಹೇಳಬಯಸುತ್ತಾನೋ ಅದನ್ನು ಬರೆಯಬೇಕು, ಮಾತನಾಡಬಾರದು.

-ಅರ್ನೆಸ್ಟ್ ಹೆಮಿಂಗ್‌ವೇ